**Email:** onixsolarenergy.rights@in.mpms.mufg.com, **Investor Grievance Email:** onixsolarenergy.rights@in.mpms.mufg.com
**Contact Person:** Shanti Gopalakrishnan, **Website:** https://in.mpms.mufg.com/, **SEBI Registration No.:** INR000004058

Investors may contact the Registrar to Issue / Company Secretary in case of any Pre-Issue/ Post Issue related problems such as non-receipt of Allotment advice/demat credit etc. All grievances relating to the ASBA process may be addressed to the Registrar to the Issue, with a copy to the SCSB giving full details such as name, address of the Applicant. Contact number(s). email address of the sole/ first holder, folio number or demat account, number of Rights Equity Shares applied for, amount blocked, ASBA account number and the Designated Branch of the SCSB where the Application Forms, or the plain paper application, as the case may be, was submitted by the Investors along with a photocopy of the acknowledgement slip. For details on the ASBA process, see ***"Terms of the Issue"*** beginning on page 72 of the LOF.

**FOR Mihika Industries Limited**
**On behalf of the Board of Directors**
**Sd/-**
**Mr. Umang Agrawal**
**Company Secretary and Compliance Officer**

**Date: November 12, 2026**
**Place: Ahmedabad**

***Disclaimer:* Mihika Industries Limited** is proposing, subject to receipt of requisite approvals, market conditions and other considerations, to issue Equity Shares on a rights basis and has filed the Letter of Offer with the Securities and Exchange Board of India and Stock Exchange. The Letter of Offer shall be available on the website of SEBI at www.sebi.gov.in, website of BSE Limited at www.bseindia.com and the website of the Registrar at www.in.mpms.mufg.com. Investors should note that investment in equity shares involves a high degree of risk and are requested to refer to the Letter of Offer including the section "Risk Factors" beginning on page 24 of the Letter of Offer.

This announcement does not constitute an offer of securities for sale in any jurisdiction, including the United States, and any securities described in this announcement may not be offered or sold in the United States absent registration under the US Securities Act of 1933, as amended, or an exemption from registration. There will be no public offering of Rights Equity Shares in the United States.

---

# SCHNEIDER ELECTRIC PRESIDENT SYSTEMS LIMITED

**CIN:** L32109KA1984PLC079103
**Regd. Office:** 5C/1, KIADB Industrial Area, Attibele, Bengaluru - 562107, Karnataka, India
**Phone:** +919240298360; **E-mail:** companysecretary@se.com
**Website :** www.schneiderelectricpresident.com

## STATEMENT OF UNAUDITED FINANCIAL RESULTS FOR THE HALF YEAR AND 2ND QUARTER ENDED SEPTEMBER 30, 2026

The Unaudited Financial Results for the half year and 2nd quarter ended September 30, 2026, were reviewed by the Audit and Risk Management Committee and approved by the Board of Directors at their meetings held on November 12, 2026. In accordance with Regulation 33 of the SEBI (Listing Obligations and Disclosure Requirements) Regulations, 2015, the Results have been submitted to BSE Limited and Metropolitan Stock Exchange of India Limited and are available on their respective websites at **www.bseindia.com** and **www.msei.in**.

The Results are also available on the Company's website at **https://www.schneiderelectricpresident.com/investors/annual-reports-financials.html** and can also be accessed by scanning the QR Code provided in this communication.

For and on behalf of Board of Directors of
**Schneider Electric President Systems Limited**
Sd/-
**Anuj Kudesia**
Managing Director
DIN: 10629156

Place: Bengaluru
Date : November 12, 2026

Schneider Electric

---

# ARYAMAN CAPITAL MARKETS LIMITED

**Registered Office:** 60, Khatau Building, Gr. Floor, Alkesh Dinesh Modi Marg, Fort, Mumbai, Maharashtra, 400001.
**Tel.:** 022-22618635 | **Fax:** 022-22630434 | **CIN:** L65999MH2008PLC184939
**Website:** https://www.afsl.co.in/acml/index.php | **Email:** aryacapm@gmail.com

## EXTRACT OF THE UNAUDITED FINANCIAL RESULTS FOR THE QUARTER AND HALF YEAR ENDED SEPTEMBER 30, 2026

(₹ In Lakhs)

| Sr. No. | PARTICULARS | STANDALONE RESULTS | | | | | |
|---|---|---|---|---|---|---|---|
| | | Quarter Ended | | | Half Year Ended | | Year Ended |
| | | 30.09.2026 | 30.06.2026 | 30.09.2025 | 30.09.2026 | 30.09.2025 | 31.03.2026 |
| | | Unaudited | Unaudited | Unaudited | Unaudited | Unaudited | Audited |
| 1 | Total Income | 2,115.77 | 950.24 | 1,139.29 | 3,066.01 | 3,758.11 | 6,156.78 |
| 2 | Net Profit / (Loss) for the period before Tax, (before Exceptional and/ or Extraordinary items) | 2,088.31 | 923.46 | 853.24 | 3,011.77 | 2134.22 | 3,314.18 |
| 3 | Net Profit / (Loss) for the period before tax (after Exceptional and /or Extraordinary items) | 2,088.31 | 923.46 | 853.24 | 3,011.77 | 2134.22 | 3,314.18 |
| 4 | Net Profit / (Loss) for the period after tax (after Exceptional and/or Extraordinary items) | 1,792.99 | 783.02 | 671.85 | 2,576.01 | 1775.06 | 2,779.35 |
| 5 | Total Comprehensive Income for the period (Comprising Profit/Loss for the period after tax) and Other Comprehensive Income (after tax) | 218.58 | 896.86 | 615.30 | 1,115.44 | 2063.91 | 3,072.82 |
| 6 | Equity Share Capital | 1197.71 | 1197.71 | 1197.71 | 1197.71 | 1197.71 | 1197.71 |
| 7 | Reserves (excluding Revaluation Reserve as shown in the Audited Financial Result of 31.03.2025) | 9,613.32 | 9,613.32 | 6540.51 | 9,613.32 | 6540.51 | 6,540.51 |
| 8 | Earnings Per Share (of ₹ 10/- each) (for continuing and discontinued operations) - | | | | | | |
| | 1. Basic : | 14.97 | 6.54 | 5.61 | 21.51 | 14.82 | 23.21 |
| | 2. Diluted: | 14.97 | 6.54 | 5.61 | 21.51 | 14.82 | 23.21 |

**Note:**

a) The figures for the corresponding previous period have been regrouped/reclassified wherever necessary, to make them comparable.
b) The Company has only one business one segment in which it operates viz. Other Financial Services.
c) These results have been subjected to limited review by the Statutory Auditors.
d) The above result for the Quarter ended 30th September,2026 have been reviewed by the audit committee meeting held on November 12th 2026 and approved by the Board of Directors in their meeting held on November 12th, 2026.
e) The aforesaid Half Yearly Financial Results are also being disseminated on the website of the Company i.e. (https://www.afsl.co.in/Acml/investor.php).

**For Aryaman Capital Markets Limited**
**Sd/-**
**Shreyas Shah**
**Whole Time Director**
**DIN: 01835575**

**Place: Mumbai**
**Date: November 12, 2026**

---

ESCORP ASSET MANAGEMENT

# ESCORP ASSET MANAGEMENT LIMITED

**CIN: L17121MH2011PLC213451**
**Registered Office:** 60, Khatau Building, Gr. Floor, Alkesh Dinesh Modi Marg, Fort, Mumbai, Maharashtra, 400001.
**Tel :** 022-62166999 | **Email:** info@escorpamc.co.in | **Website:** www.escorpamc.co.in

## EXTRACT OF THE UNAUDITED FINANCIAL RESULTS FOR THE QUARTER AND HALF YEAR ENDED SEPTEMBER 30, 2026

[₹ in Lakhs]

| Sr. No. | Particulars | Standalone Results | | | | | |
|---|---|---|---|---|---|---|---|
| | | Quarter Ended | | | Half year Ended | | Year Ended |
| | | 30.09.2026 | 30.06.2026 | 30.09.2025 | 30.09.2026 | 30.09.2025 | 31.03.2026 |
| | | (Unaudited) | (Unaudited) | (Unaudited) | (Unaudited) | (Unaudited) | (Audited) |
| 1 | Total Income | 145,78 | 492.81 | 138.46 | 638.59 | 230.61 | 443.73 |
| 2 | Net Profit / (Loss) for the period before Tax, (before Exceptional and/or Extraordinary items) | 133.40 | 480.93 | 130.32 | 614.34 | 217.00 | 365.00 |
| 3 | Net Profit / (Loss) for the period before tax (after Exceptional and /or Extraordinary items) | 133.40 | 480.93 | 130.32 | 614.34 | 217.00 | 365.00 |
| 4 | Net Profit/(Loss) for the period after tax (after Exceptional and/ or Extraordinary items) | 109.93 | 408.91 | 106.83 | 518.85 | 179.36 | 298.13 |
| 5 | Total Comprehensive Income for the period ( Comprising Profit/Loss for the period after tax) and Other Comprehensive Income (after tax) | 346.98 | 1,068.45 | 384.98 | 1,415.44 | 389.08 | 285.60 |
| 6 | Equity Share Capital | 1,111.67 | 1,111.67 | 1,111.67 | 1,111.67 | 1,111.67 | 1,111.67 |
| 7 | Reserves (excluding Revaluation Reserve as shown in the Audited Financial Result of 31.03.2025) | 5,842.54 | 5,842.54 | 5,556.93 | 5,842.54 | 5,556.93 | 5,556.93 |
| 8 | Earnings per share (of ₹10/- each) (for continuing and discontinued operations) - | | | | | | |
| | 1. Basic | 0.99 | 3.68 | 0.96 | 4.67 | 1.61 | 2.68 |
| | 2. Diluted | 0.99 | 3.68 | 0.96 | 4.67 | 1.61 | 2.68 |

a) The figures for the corresponding previous period have been regrouped/reclassified wherever necessary, to make them comparable.
b) The Company has only one business one segment in which it operates viz. Other Financial Services.
c) The above result for the half year ended on 30th Sept 2026 have been reviewed by the audit committee meeting held on November 12th, 2026 and approved by the Board of Directors in their meeting held on November 12th, 2026.
d) The aforesaid Half yearly Financial Results are also being disseminated on the website of the Company i.e. (http://www.escorpamc.co.in/investor-relations.html).

**For Escorp Asset Management Limited**
**Sd/-**
**Shripal Shah**
**Whole Time Director**
**DIN No. 01628855**

**Place: Mumbai**
**Date : November 12, 2026**

## ರಾಜ್ಯ ಸರಕಾರದ ಖಾತೆಗೆ ಕೇಂದ್ರದ ಪಟ್ಟಿಯಲ್ಲಿದ್ದ ಸುಮಾರು 29 ಸಾವಿರ ಕೋಟಿ: ತೇಜಸ್ವಿ ಸೂರ್ಯ

# ಮೆಟ್ರೊ ವಿಚಾರದಲ್ಲಿ ರಾಜ್ಯ ಸರಕಾರದ ಕುಚೇಷ್ಟೆ

**ಬೆಂಗಳೂರು:** ಬೆಂಗಳೂರು ಮೆಟ್ರೊ ವಿಚಾರದಲ್ಲಿ ರಾಜ್ಯ ಸರಕಾರದ ಕುಚೇಷ್ಟೆ ಮಾಡಿದೆ ಎಂದು ಸಂಸದ ತೇಜಸ್ವಿ ಸೂರ್ಯ ಆರೋಪಿಸಿದ್ದಾರೆ.

ರಾಜ್ಯ ಬಿಜೆಪಿ ಕಾರ್ಯಾಲಯದಲ್ಲಿ ವಿಡಿಯೊ ಮೂಲಕ ದಾಖಲೆಗಳನ್ನು ನೀಡಿ ಮಾತನಾಡಿ, ಕೇಂದ್ರ ಸರಕಾರವು ಬೆಂಗಳೂರು ಮೆಟ್ರೊ ರೈಲ್ವೆ ಕಾರ್ಪೊರೇಷನ್‌ಗೆ ಕೊಡಿಸುವ (ಬಿಎಂಆರ್‌ಸಿಎಲ್) ಸುಮಾರು 29 ಸಾವಿರ ಕೋಟಿ ಸಾಲ ಕೇಂದ್ರ ಸರಕಾರದ ಕಾಲಂಗೆ ಹಾಕಿಲ್ಲ. ಅದನ್ನು ರಾಜ್ಯ ಸರಕಾರದ ಕಾಲಂಗೆ ಹಾಕಿಕೊಂಡಿದ್ದಾರೆ. ಈ ಸಾಲಕ್ಕೆ ಗ್ಯಾರಂಟಿ ಕೊಟ್ಟಿದ್ದು ಕೇಂದ್ರ ಸರಕಾರ. ಕೇಂದ್ರ ಸರಕಾರವು ಬಿಎಂಆರ್‌ಸಿಎಲ್‌ಗೆ ಸಾಲ ಕೊಡಿಸಿದೆ. ಆ ಸಾಲ ರಾಜ್ಯ ಸರಕಾರ ಮರುಪಾವತಿ ಮಾಡುವುದಿಲ್ಲ. ಅದನ್ನು ಬಿಎಂಆರ್‌ಸಿಎಲ್ ಮರುಪಾವತಿ ಮಾಡಲಿದೆ ಎಂದರು.

ಲೆಕ್ಕಪತ್ರ ತೋರಿಸುವಾಗ ಕೇಂದ್ರ ಸರಕಾರದ ಕಾಲಂನಲ್ಲಿ ಇದ್ದ ಮೇಲಿನ ಸಾಲದ ಮೊತ್ತವನ್ನು ರಾಜ್ಯ ಸರಕಾರದ ಕಾಲಂಗೆ ಸ್ಥಳಾಂತರ ಮಾಡಿದ್ದಾರೆ. ಇದರಿಂದ ಲೆಕ್ಕ ಉಲ್ಟಾ ಆಗುತ್ತಿದೆ. ಬಿಎಂಆರ್‌ಸಿಎಲ್ ಮರುಪಾವತಿ ಮಾಡುವಾಗ ರಾಜ್ಯದ ಪಾಲೆಲ್ಲಿದೆ? ಇದನ್ನು ಬೆಂಗಳೂರಿನ ಸಚಿವರು ಮತ್ತು ಮುಖ್ಯಮಂತ್ರಿಯವರು ತಪ್ಪಾಗಿ ತೋರಿಸಿ, ರಾಜ್ಯ- ಬೆಂಗಳೂರಿನ ಜನರಿಗೆ ಸುಳ್ಳು ಹೇಳುತ್ತಿದ್ದಾರೆ. ಸಂವಿಧಾನದ ಮೇಲೆ ಪ್ರತಿಜ್ಞೆ ಪಡೆದ ಸಚಿವರು ಮತ್ತು ಮುಖ್ಯಮಂತ್ರಿಯವರು ಈ ರೀತಿ ಕುಚೇಷ್ಟೆ ಮಾಡುವುದು ಸರಿಯಲ್ಲ, ಬಿಎಂಆರ್‌ಸಿಎಲ್ ದಾಖಲೆಪತ್ರಗಳ ಪ್ರಕಾರ ಕೇಂದ್ರದ ಹೂಡಿಕೆ ಪ್ರಮಾಣ ಶೇ.54 ಹಾಗೂ ರಾಜ್ಯದ ಹೂಡಿಕೆ ಶೇ.46. ಬಿಎಂಆರ್‌ಸಿಎಲ್ ಅನ್ನು ಕೇಂದ್ರ-ರಾಜ್ಯ ಸರಕಾರಗಳು ಶೇ.50ರಂತೆ ಹೂಡಿಕೆ ಮಾಡಿ ಮಾಲೀಕತ್ವ ಪಡೆದಿವೆ ಎಂದರು.



ಸುದ್ದಿಗೋಷ್ಠಿಯಲ್ಲಿ ಸಂಸದ ತೇಜಸ್ವಿ ಸೂರ್ಯ ಮಾತನಾಡಿದರು.

ಮೆಟ್ರೊ, ಬೆಂಗಳೂರು, ಕೊಚ್ಚಿ, ದೆಹಲಿ, ಮುಂಬೈ ಮೊದಲಾದೆಡೆ ಇದೇ ವ್ಯವಸ್ಥೆಯಡಿ ನಡೆಯುತ್ತಿದೆ. ಒಟ್ಟು ಹೂಡಿಕೆ 77,891 ಕೋಟಿಯಲ್ಲಿ ಕೇಂದ್ರದ ಪಟ್ಟಿಯಲ್ಲಿದ್ದ ಸುಮಾರು 29 ಸಾವಿರ ಕೋಟಿಯನ್ನು ರಾಜ್ಯ ಸರಕಾರದ ಖಾತೆಗೆ ಸೇರಿಸಿದ್ದಾರೆ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಕೇಂದ್ರ ಸರಕಾರ ಪ್ರತಿ ಕಿಮೀಗೆ 57 ಕೋಟಿ, ರಾಜ್ಯ ಸರಕಾರ 297 ಕೋಟಿ ಖರ್ಚು ಮಾಡುತ್ತಿದೆ ಎಂದು ರಾಜ್ಯ ಸರಕಾರ ಹೇಳಿರುವುದು ಇದಕ್ಕೆ ಯಾವುದೇ ಆಧಾರ ಇಲ್ಲ. ಸಾಲದ ಮೊತ್ತ ತಮ್ಮ ಖಾತೆಗೆ ಸೇರಿಸಿಕೊಂಡು ಈ ಆಧಾರರಹಿತ ಮಾಹಿತಿ ನೀಡಿದ್ದಾಗಿ ಟೀಕಿಸಿದರು. ಕೇವಲ 16 ಶೇಕಡಾವನ್ನು ಕೇಂದ್ರ ಕೊಡುತ್ತಿದೆ ಎನ್ನುವ ಇವರು ಅದೂ ಬೇಡವೆಂದು ಪ್ರಕಟಿಸಲಿ ಎಂದು ರಾಜ್ಯ ಗೃಹ ಸಚಿವರಿಗೆ ಸವಾಲು ಹಾಕಿದರು.

**ಪಿಂಕ್ ಲೈನ್ ವಿಳಂಬಕ್ಕೆ ಯಾರು ಹೊಣೆ?:** ಇನ್ನು 2014ರಲ್ಲಿಯೇ ಪಿಂಕ್ ಲೈನ್‌ಗೆ ಅನುಮೋದನೆ ದೊರೆತಿದ್ದರೂ ಆರಂಭಿಕ ಮೂರು ವರ್ಷಗಳ ಕಾಲ ಕಾಮಗಾರಿ ಶುರುವಾಗಲಿಲ್ಲ. ಜೆಡಿಎಸ್-ಕಾಂಗ್ರೆಸ್ ಮೈತ್ರಿ ಸರಕಾರದ ಅವಧಿಯಲ್ಲಿ ಟೆಂಡರ್ ಕರೆದು ರದ್ದುಪಡಿಸಲಾಗಿತ್ತು. ನಂತರ ಕೋವಿಡ್ ಸಂಕಷ್ಟದ ನಡುವೆಯೂ ಬಿಜೆಪಿ ಸರಕಾರದ ಅವಧಿಯಲ್ಲಿ ಸುರಂಗ ಮಾರ್ಗದ ಕಾಮಗಾರಿಗೆ ವೇಗ ನೀಡಿ ಶೇ. 72ರಷ್ಟು ಕೆಲಸ ಪೂರ್ಣಗೊಳಿಸಲಾಗಿತ್ತು. ಕಳೆದ 12 ವರ್ಷಗಳಲ್ಲಿ 9 ವರ್ಷಗಳ ಕಾಲ ಕಾಂಗ್ರೆಸ್ ಸರಕಾರವೇ ಅಧಿಕಾರದಲ್ಲಿದ್ದು, ವರ್ಷಕ್ಕೆ ಸರಾಸರಿ 700 ಮೀಟರ್‌ನಂತೆ ಕೇವಲ 7.5 ಕಿ.ಮೀ ಮಾರ್ಗವನ್ನಷ್ಟೇ ನಿರ್ಮಿಸಲಾಗಿದೆ. ಈಗ 12 ವರ್ಷಗಳ ಬಳಿಕ ಉದ್ಘಾಟನೆಯಾಗುತ್ತಿದ್ದು, ವಿಳಂಬಕ್ಕೆ ರಾಜ್ಯ ಸರಕಾರವೇ ಹೊಣೆಯಾಗಿದೆ ಎಂದು ಸಂಸದ ತೇಜಸ್ವಿ ಸೂರ್ಯ ಆರೋಪಿಸಿದರು.

> ಕಾಂಗ್ರೆಸ್ ಸರಕಾರಕ್ಕೆ ಬಿಎಂಟಿಸಿ ಬಸ್ ಸಿಬ್ಬಂದಿಗೆ ಸಂಬಳ ಕೊಡಲು ದುಡ್ಡಿಲ್ಲ, ಕೆಎಸ್‌ಆರ್‌ಟಿಸಿಗೆ 5 ಸಾವಿರ ಕೋಟಿ ಬಾಕಿ ಇದೆ. ಪಿಂಚಣಿಗಳನ್ನೂ ನಿಲ್ಲಿಸಿದ್ದಾರೆ. ದಿವಾಳಿ ಆದ ಈ ಸರಕಾರಕ್ಕೆ ಅಂತಾರಾಷ್ಟ್ರೀಯ ಸಂಸ್ಥೆಗಳು ಸಾಲ ಕೊಡಲು ಸಾಧ್ಯವೇ? ಕೇಂದ್ರದ ಗ್ಯಾರಂಟಿಯಿಂದ 29 ಸಾವಿರ ಕೋಟಿ ಸಾಲ ಲಭಿಸಿದೆ.
>
> ತೇಜಸ್ವಿ ಸೂರ್ಯ, ಸಂಸದ

> ಪ್ರಧಾನ ಮಂತ್ರಿಗಳು ರಾಜ್ಯಕ್ಕೆ ಬರುತ್ತಿದ್ದು, ನಾವು ಅವರನ್ನು ಗೌರವಯುತವಾಗಿ ಸ್ವಾಗತಿಸಿ, ಗೌರವಯುತವಾಗಿ ನಮ್ಮ ರಾಜ್ಯದ ವಿಚಾರವನ್ನು ಪ್ರಸ್ತಾಪಿಸುತ್ತೇವೆ. ರಾಜ್ಯದಿಂದ ಭಾರತ ದೇಶಕ್ಕೆ ಗೌರವ ಬರುವ ವಿಚಾರ ಇದೆ. ಹೀಗಾಗಿ ಅವರು ನಮಗೆ ಸಹಕಾರ ನೀಡಬೇಕು, ನಾವು ಅವರಿಗೆ ಸಹಕಾರ ನೀಡಬೇಕು. ಬೆಂಗಳೂರಿನ ಮೆಟ್ರೊ ಪಿಂಕ್ ಲೈನ್ ಉದ್ಘಾಟನೆಗೆ ಸಿದ್ಧತೆ ಮಾಡಿಕೊಳ್ಳಲಾಗಿದೆ.
>
> -ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ

**ಆರೆಂಜ್ ಲೈನ್ ವೆಚ್ಚ ಪರಿಷ್ಕರಣೆ:** ಮೆಟ್ರೋ ಫೇಸ್-3ಎ ರೆಡ್ ಲೈನ್ ಯೋಜನೆಯಲ್ಲಿ ಸುರಂಗ ನಿರ್ಮಾಣ ವೆಚ್ಚವನ್ನು ಪ್ರತಿ ಕಿಮೀಗೆ 300 ಕೋಟಿಯಂತೆ ಅಂದಾಜಿಸಿ ಒಟ್ಟು 28,405 ಕೋಟಿ ಪ್ರಸ್ತಾವನೆ ಸಲ್ಲಿಸಲಾಗಿತ್ತು. ದೇಶಾದ್ಯಂತ ಸುರಂಗ ನಿರ್ಮಾಣದ ಮಾನದಂಡ ವೆಚ್ಚ ಪ್ರತಿ ಕಿ.ಮೀ.ಗೆ 175 ಕೋಟಿಯಿದೆ. ಕೇಂದ್ರ ಸರಕಾರವು ಈ ಪ್ರಸ್ತಾವನೆಯನ್ನು ಮರುಪರಿಶೀಲಿಸಿ, ವಿನ್ಯಾಸ ಮತ್ತು ವೆಚ್ಚವನ್ನು 25,999 ಕೋಟಿಗೆ ಇಳಿಸುವ ಮೂಲಕ ಸಾರ್ವಜನಿಕರ 2,406 ಕೋಟಿ ತೆರಿಗೆ ಹಣವನ್ನು ಉಳಿಸಿದೆ. ಇದೇ ವೇಳೆ, 2024ರಲ್ಲಿ ಅನುಮೋದನೆಗೊಂಡಿರುವ ಆರೆಂಜ್ ಲೈನ್ ವಿನ್ಯಾಸವನ್ನು ರಾಜ್ಯ ಸರಕಾರ ಮೂರು ಬಾರಿ ಬದಲಿಸಿರುವುದರಿಂದ ಕಾಮಗಾರಿ ವಿಳಂಬವಾಗುತ್ತಿದೆ ಎಂದು ಸಂಸದ ತೇಜಸ್ವಿ ಸೂರ್ಯ ಆರೋಪಿಸಿದರು.

**ಕೃಷ್ಣ ಹೆಸರು ಕೈಬಿಟ್ಟಿದ್ದಕ್ಕೆ ಆಕ್ಷೇಪ:** ಪ್ರಧಾನಿ ನರೇಂದ್ರ ಮೋದಿ ಕಾರ್ಯಕ್ರಮದಲ್ಲಿ ಈ ಹಿಂದೆ ಬೆಂಗಳೂರು ನಗರಾಭಿವೃದ್ಧಿ ಸಚಿವ ಕೃಷ್ಣಬೈರೇಗೌಡ ಅವರ ಭಾಷಣಕ್ಕೆ ಅವಕಾಶ ನೀಡಲಾಗಿತ್ತು. ಆದರೆ ಅಂತಿಮ ಪಟ್ಟಿಯಲ್ಲಿ ಅವರ ಭಾಷಣವನ್ನು ಕೈಬಿಟ್ಟಿರುವುದು ಇದೀಗ ವಿವಾದಕ್ಕೆ ಕಾರಣವಾಗಿದೆ. ಈ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಅವರು, ಕರ್ನಾಟಕ ರಾಜ್ಯಕ್ಕೆ ನ್ಯಾಯ ಕೇಳಿದ್ದಕ್ಕೆ ಸಿಕ್ಕ ಬಹುಮಾನ - ನನ್ನ ಭಾಷಣ ಕಟ್. ಬೆಂಗಳೂರು ಅಭಿವೃದ್ಧಿ ಸಚಿವನಿಗೆ ಮೆಟ್ರೋ ಉದ್ಘಾಟನೆಯಲ್ಲಿ ಮಾತನಾಡಲು ಇಲ್ಲ ಅವಕಾಶ. ಸಭಾ ಕಾರ್ಯಕ್ರಮದ ಡ್ರಾಫ್ಟ್‌ನಲ್ಲಿ ನನ್ನ ಮಾತಿಗೆ ಅವಕಾಶ ನಿಗದಿಯಾಗಿತ್ತು. ಆದರೆ ಅಂತಿಮ ಪಟ್ಟಿಯಲ್ಲಿ ಬೆಂಗಳೂರು ಅಭಿವೃದ್ಧಿ ಸಚಿವರ ಮಾತನ್ನು ಕಟ್ ಮಾಡಲಾಗಿದೆ. ಬಹುತೇಕ ಬಂಡವಾಳ ಖರ್ಚು ನಮ್ಮದು. ಕರ್ನಾಟಕಕ್ಕೆ ನ್ಯಾಯಯುತ ಪಾಲು ಕೇಳಿದರೆ ಈ ರೀತಿ ಶಿಕ್ಷೆ. ಪರವಾಗಿಲ್ಲ, ನೀವು ನನ್ನ ಮಾತನ್ನು ಕಟ್ ಮಾಡಬಹುದು. ಆದರೆ ಬೆಂಗಳೂರಿನ ಅಭಿವೃದ್ಧಿಗೆ ಕೆಲಸ ಮಾಡೋದನ್ನ ನಿಲ್ಲಿಸಲಿಕ್ಕೆ ಆಗೋದಿಲ್ಲ. ಇನ್ನೂ ಹೆಚ್ಚಿನ ಪರಿಶ್ರಮದಿಂದ ಕೆಲಸ ಮಾಡುತ್ತೇವೆ ಎಂದು ಟೀಕಿಸಿದ್ದಾರೆ.

## ಹಿರಿಯ ಅಧಿಕಾರಿಗಳು ಸೇರಿ 30ಕ್ಕೂ ಹೆಚ್ಚು ಮಂದಿ ವಿರುದ್ಧ ಎಫ್‌ಐಆರ್

# ಜಿಬಿಎನಲ್ಲಿ ನಕಲಿ ಇ ಖಾತೆ ಆಟ ಬಯಲು

**ಬೆಂಗಳೂರು:** ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯ ಕಂದಾಯ ಇಲಾಖೆಯಲ್ಲಿ ನಕಲಿ ದಾಖಲೆಗಳನ್ನು ಬಳಸಿ ಅಕ್ರಮವಾಗಿ ಇ-ಖಾತಾ ಮಾಡಿಕೊಟ್ಟಿರುವ ಪ್ರಕರಣ ಬೆಳಕಿಗೆ ಬಂದಿದೆ.

ಬ್ಯಾಂಕ್‌ಗಳಿಂದ ಹರಾಜಾಗುವ ಅಡಮಾನ ಆಸ್ತಿಗಳಿಗೆ ಇ-ಖಾತಾ ಸೃಷ್ಟಿಸಲು ರೂಪಿಸಿರುವ ಮಾಡ್ಯೂಲ್ ಅನ್ನು ದುರ್ಬಳಕೆ ಮಾಡಿಕೊಂಡು, ಹೊಸದಾಗಿ ನಿರ್ಮಿಸಲಾದ ಫ್ಲ್ಯಾಟ್‌ಗಳಿಗೆ ಅಕ್ರಮವಾಗಿ ಇ-ಖಾತಾ ಮಂಜೂರು ಮಾಡಿರುವ ಆರೋಪ ಕೇಳಿಬಂದಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಇನ್‌ಚಾರ್ಜ್ ಕಂದಾಯ ಅಧಿಕಾರಿಗಳಾದ ಬಸವರಾಜ್ ಮಗ್ಗಿ ಮತ್ತು ಲೋಕಮಾತಾ ಡಿ.ಎಸ್. ಸೇರಿದಂತೆ ಖಾಸಗಿ ಬಿಲ್ಡರ್‌ಗಳು ಹಾಗೂ ಅರ್ಜಿದಾರರ ವಿರುದ್ಧ ಎರಡು ಎಫ್‌ಐಆರ್ ದಾಖಲಾಗಿವೆ.

ಜಿಬಿಎ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ನೀಡಿದ ದೂರಿನ ಆಧಾರದ ಮೇಲೆ ಹಲಸೂರು ಗೇಟ್ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಈಗಾಗಲೇ ಇಬ್ಬರು ಅಧಿಕಾರಿಗಳನ್ನು ಅಮಾನತುಗೊಳಿಸ ಲಾಗಿದ್ದು, ಪ್ರಕರಣದಲ್ಲಿ 35 ಖಾತೆದಾರರ ಪಾತ್ರದ ಬಗ್ಗೆಯೂ ತನಿಖೆ ನಡೆಯುವ ಸಾಧ್ಯತೆಯಿದೆ. ಖಾತಾ ಅಕ್ರಮಕ್ಕೆ




ಸಂಬಂಧಿಸಿ ದಂತೆ ಖಾತೆದಾರರ ವಿರುದ್ಧವೂ ಎಫ್‌ಐಆರ್ ದಾಖಲಾಗಿರುವುದು ಗಮನಾರ್ಹವಾಗಿದೆ.

**ಮಾಡ್ಯೂಲ್ ದುರ್ಬಳಕೆ:** ಬ್ಯಾಂಕ್‌ಗಳು ಅಥವಾ ಹಣಕಾಸು ಸಂಸ್ಥೆಗಳು ಸಾಲ ಮರುಪಾವತಿ ಯಾಗದ ಹಿನ್ನೆಲೆಯಲ್ಲಿ ವಶಕ್ಕೆ ಪಡೆದಿರುವ ಅಡಮಾನ ಆಸ್ತಿಗಳನ್ನು ಹರಾಜು ಮಾಡುವ ಪ್ರಕ್ರಿಯೆಯಲ್ಲಿ ಇ-ಖಾತಾ ಸೃಷ್ಟಿಸಲು ಇ-ಆಸ್ತಿ ತಂತ್ರಾಂಶದಲ್ಲಿ ಮಾಡ್ಯೂಲ್ ವ್ಯವಸ್ಥೆ ಕಲ್ಪಿಸಲಾಗಿದೆ. ಆದರೆ, ಈ ಸೌಲಭ್ಯವನ್ನು ನಿಯಮಬಾಹಿರವಾಗಿ ಬಳಸಿಕೊಂಡು ಅರ್ಹತೆ ಇಲ್ಲದ ಹೊಸ ಫ್ಲ್ಯಾಟ್‌ಗಳಿಗೆ ಇ-ಖಾತಾ ಮಂಜೂರು ಮಾಡಲಾಗಿದೆ ಎಂಬುದು ದೂರಿನ ಪ್ರಮುಖ ಆರೋಪವಾಗಿದೆ. ಪ್ರಕ್ರಿಯೆಗೆ ಸಂಬಂಧಿಸಿದ ಅಧಿಕೃತ ಮಾರಾಟ ಪ್ರಮಾಣಪತ್ರ ಅಥವಾ ಅಗತ್ಯ ದಾಖಲೆಗಳ ಬದಲಿಗೆ ಜಂಟಿ ಅಭಿವೃದ್ಧಿ ಒಪ್ಪಂದಗಳು, ಮೂಲ ನಿವೇಶನದ ಕ್ರಯಪತ್ರಗಳು, ಕಟ್ಟಡ ಪರವಾನಗಿ ಹಾಗೂ ಇತರ ದಾಖಲೆಗಳನ್ನು ಅಪ್‌ಲೋಡ್ ಮಾಡ ಲಾಗಿದೆ. ಈ ದಾಖಲೆಗಳು ಮಾಡ್ಯೂಲ್‌ನ ಕಡ್ಡಾಯ ಮಾನದಂಡಗಳನ್ನು ಪೂರೈಸದಿದ್ದರೂ ಅಧಿಕಾರಿಗಳು ಇ-ಖಾತಾಗಳಿಗೆ ಅನುಮೋದನೆ ನೀಡಿದ್ದಾರೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

**ಕಾಯ್ದೆ ಉಲ್ಲಂಘನೆ ಆರೋಪ:** ಗ್ರೇಟರ್ ಬೆಂಗಳೂರು ಆಡಳಿತ ಕಾಯಿದೆ 2024ರ ಸೆಕ್ಷನ್ 147 ಹಾಗೂ ಸಂಬಂಧಿತ ಸರ್ಕಾರಿ ಆದೇಶಗಳು ಮತ್ತು ಸುತ್ತೋಲೆಗಳ ಪ್ರಕಾರ, ನಿಗದಿತ ದಿನಾಂಕದ ನಂತರ ನಿರ್ಮಿಸಲಾದ ಅನಧಿಕೃತ ಕಟ್ಟಡಗಳು ಅಥವಾ ಫ್ಲ್ಯಾಟ್‌ಗಳಿಗೆ ಖಾತಾ ನೀಡುವ ವಿಚಾರದಲ್ಲಿ ನಿರ್ಬಂಧಗಳಿವೆ ಎಂದು ದೂರಿನಲ್ಲಿ ವಿವರಿಸಲಾಗಿದೆ. ನಿಯಮಗಳನ್ನು ಉಲ್ಲಂಘಿಸಿ, ಸಂಬಂಧವಿಲ್ಲದ ದಾಖಲೆಗಳನ್ನು ತಂತ್ರಾಂಶಕ್ಕೆ ಅಪ್‌ಲೋಡ್ ಮಾಡಿ ಇ-ಖಾತಾ ಮಂಜೂರು ಮಾಡಿರುವುದು ಕರ್ತವ್ಯಲೋಪ ಮಾತ್ರವಲ್ಲದೆ, ಅಧಿಕಾರ ದುರುಪಯೋಗ, ವಂಚನೆ ಮತ್ತು ಅಪರಾಧಿಕ ನಂಬಿಕೆದ್ರೋಹದ ಸ್ವರೂಪದ್ದಾಗಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

> ### 110 ಇ-ಖಾತಾಗಳಿಗೆ ಅಕ್ರಮ ಮಂಜೂರಾತಿ?
>
> ತಾಂತ್ರಿಕ ಪರಿಶೀಲನೆ ವೇಳೆ ಸೂಕ್ತ ದಾಖಲೆಗಳಿಲ್ಲದ ಅನರ್ಹ ಆಸ್ತಿಗಳಿಗೆ ಮಾಡ್ಯೂಲ್ ಮೂಲಕ ಒಟ್ಟು 110 ಹೊಸ ಇ-ಖಾತಾಗಳನ್ನು ಅಕ್ರಮವಾಗಿ ಅನುಮೋದಿಸಿರುವುದು ಪತ್ತೆಯಾಗಿದೆ. 2025ರ ಡಿಸೆಂಬರ್ 29ರಿಂದ 2026ರ ಜೂನ್ 15ರವರೆಗಿನ ಅವಧಿಯಲ್ಲಿ ಈ ಅಕ್ರಮಗಳು ನಡೆದಿರುವ ಆರೋಪವಿದೆ. ಲೋಕಮಾತಾ ಡಿ.ಎಸ್. ಅವರ ಲಾಗಿನ್ ಐಡಿ ಮೂಲಕ ಹಲವು ಆಸ್ತಿಗಳಿಗೆ ಇ-ಖಾತಾ ಮಂಜೂರು ಮಾಡಲಾಗಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಹಳೆಯ ವಾರ್ಡ್ ಸಂಖ್ಯೆ 130 ಮತ್ತು 198ಕ್ಕೆ ಸೇರಿದ ಕೆಲವು ಆಸ್ತಿಗಳ ಅರ್ಜಿದಾರರು ಅಧಿಕಾರಿಯೊಂದಿಗೆ ಶಾಮೀಲಾಗಿ ನಿಯಮಬಾಹಿರವಾಗಿ ಇ-ಖಾತಾ ಪಡೆದುಕೊಂಡಿದ್ದಾರೆ ಎಂಬ ಆರೋಪವೂ ಇದೆ.

# ಮಕ್ಕಳಾಗಿಲ್ಲ ಎಂದು ನಿಂದನೆ: ಪತಿಯ ಹತ್ಯೆ

**ಬೆಂಗಳೂರು:** ಮಕ್ಕಳಾಗಿಲ್ಲ ಎಂದು ನಿಂದಿಸುತ್ತಿದ್ದ ಪತಿಯನ್ನು ಹತ್ಯೆಗೈದ ಆರೋಪದಡಿ ಪತ್ನಿಯನ್ನು ಕೆಂಪೇಗೌಡ ನಗರ ಪೊಲೀಸರು ಬಂಧಿಸಿದ್ದಾರೆ.

ರಾಜಶೇಖರ್ (44) ಹತ್ಯೆಗೊಳಗಾದವ. ಈತನ ಪತ್ನಿ ಮಾಲಾಶ್ರೀ(35) ಎಂಬಾಕೆಯನ್ನು ಬಂಧಿಸಲಾಗಿದೆ. ಬುಧವಾರ ರಾತ್ರಿ ಲಕ್ಷ್ಮೀ ಪುರದಲ್ಲಿ ವಾಸವಾಗಿದ್ದ ಮನೆಯೊಂದರಲ್ಲಿ ಘಟನೆ ನಡೆದಿದೆ. ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಖಾಸಗಿ ಬ್ಯಾಂಕ್‌ನ ಲೋನ್ ಡಿಪಾರ್ಟ್‌ಮೆಂಟ್‌ನಲ್ಲಿ ರಾಜಶೇಖರ್ ಕೆಲಸ ಮಾಡುತ್ತಿದ್ದ. ದಂಪತಿಗೆ ಐದು ವರ್ಷಗಳ ಹಿಂದೆ ಮದುವೆಯಾಗಿತ್ತು. ಆದರೆ, ಮಕ್ಕಳಾಗಿರಲಿಲ್ಲ. ಮದ್ಯದ ದಾಸನಾಗಿದ್ದ ರಾಜಶೇಖರ್ ಕುಡಿದು ಬಂದು ಮಕ್ಕಳ ವಿಚಾರಕ್ಕಾಗಿ ಪತ್ನಿಯೊಂದಿಗೆ ಜಗಳವಾಡುತ್ತಿದ್ದ. ಬುಧವಾರ ರಾತ್ರಿಯೂ ಸಹ ಮನೆಗೆ ಬಂದಾಗ ಅಡುಗೆ ಮಾಡದಿರುವುದಕ್ಕೆ ಕೋಪಗೊಂಡು ಗಲಾಟೆ ಮಾಡಿದ್ದಾನೆ. ಈ ವೇಳೆ ಮಕ್ಕಳಾಗಿಲ್ಲ ಎಂದೂ ನಿಂದಿಸಿದ್ದಾನೆ. ಇಬ್ಬರ ನಡುವೆ ಗಲಾಟೆ ತಾರಕಕ್ಕೇರಿದೆ. ಸಿಟ್ಟಿನಲ್ಲಿ ಮನೆಯಲ್ಲಿದ್ದ ತರಕಾರಿ ಕತ್ತರಿಸುವ ಚಾಕು ತಂದ ಪತ್ನಿ, ಪತಿಯ ಎದೆಗೆ ಚುಚ್ಚಿದ್ದಾಳೆ. ತೀವ್ರ ರಕ್ತಸ್ರಾವವಾಗಿ ಪತಿ ಸಾವನ್ನಪ್ಪಿ ದ್ದಾನೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಘಟನೆ ಬಗ್ಗೆ ಮಾಹಿತಿ ನೀಡಿರುವ ಮೃತ ರಾಜಶೇಖರ್ ಮಾವ ರಾಜಣ್ಣ, ರಾತ್ರಿ 11:30 ರಿಂದ 12 ಗಂಟೆ ಸಮಯದಲ್ಲಿ ಸ್ನೇಹಿತರು ಫೋನ್ ಮಾಡಿ ಈ ಘಟನೆ ಬಗ್ಗೆ ತಿಳಿಸಿದರು. ಅಪ್ಪೊತ್ತಿನಲ್ಲಿ ರಸ್ತೆ ಸರಿಯಿಲ್ಲ, ಬರಕ್ಕಾಗಲ್ಲ ಎಂದು ಹೇಳಿ ಬೆಳಗ್ಗೆ ಬರುವುದಾಗಿ ತಿಳಿಸಿದ್ದೆ. ಆಸ್ಪತ್ರೆಗೆ ಕರೆದುಕೊಂಡು ಹೋಗಿ ವ್ಯವಸ್ಥೆ ಮಾಡಲು ಹೇಳಿದ್ದೆ. ಆದರೆ, ಆಗಲೇ ಅವರು ನಿಧನರಾಗಿದ್ದರು ಎಂದು ತಿಳಿದುಬಂದಿದೆ.

# ಮೀಸಲು ಹೆಚ್ಚಳ 9 ಶೆಡ್ಯೂಲ್‌ಗೆ ಸೇರಿಸಿ

**ಬೆಂಗಳೂರು:** ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಮೀಸಲಾತಿ ಹೆಚ್ಚಿಸಿದ್ದೇವೆಂದು ಬಿಜೆಪಿ ನಾಯಕರು ಹೇಳುತ್ತಿದ್ದಾರೆ. ಆದರೆ ಶೇ.56 ಮೀಸಲು ಹೆಚ್ಚಳ ವಿಚಾರ ಶೆಡ್ಯೂಲ್ 9 ಗೆ ಸೇರಿಸಿ ತಮಿಳುನಾಡು ಮಾದರಿಯಲ್ಲಿ ಆರ್ಟಿಕಲ್ 15, 16 ಕ್ಕೆ ತಿದ್ದುಪಡಿ ತರುವ ಮೂಲಕ ತಳ ಸಮುದಾಯಗಳ ಶೈಕ್ಷಣಿಕ, ಆರ್ಥಿಕ ಹಾಗೂ ಔದ್ಯೋಗಿಕ ಪ್ರಗತಿಗೆ ಪ್ರಧಾನಿ ನರೇಂದ್ರ ಮೋದಿ ನಾಂದಿ ಹಾಡಬೇಕು ಎಂದು ಕರ್ನಾಟಕ ನಾಯಕ ಸಮಾಜದ ಸಮಾನ ಮನಸ್ಕರ ವೇದಿಕೆ ಅಧ್ಯಕ್ಷ ವಿ.ಎಸ್.ಉಗ್ರಪ್ಪ ಆಗ್ರಹಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ಸರಕಾರವೇ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳು ಹಾಗೂ ಒಬಿಸಿ ಸಮುದಾಯಗಳ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಿ ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡಿ ಪತ್ರ ಬರೆದಿದೆ. ಆದರೆ ಅವರದೇ ಸರಕಾರ ಕಳೆದ 4 ವರ್ಷಗಳಿಂದ ಇದಕ್ಕೆ ಬೆಲೆ ನೀಡುತ್ತಿಲ್ಲ. ಪ್ರಧಾನಿ ನರೇಂದ್ರ ಮೋದಿ ಇದರ ಬಗ್ಗೆ ಸ್ಪಂದಿಸುವ ಕೆಲಸವನ್ನು ಇದುವರೆಗೂ ಮಾಡಿಲ್ಲ. ಇದರ ನಡುವೆ ಹೈಕೋರ್ಟ್ ಅ.12 ರಂದು ಈ ಕಾಯಿದೆಗೆ ಮರಣ ಶಾಸನ ಬರೆದಿದೆ ಎಂದು ಆಕ್ರೋಶ ಹೊರ ಹಾಕಿದರು.

ಸುದ್ದಿಗೋಷ್ಠಿಯಲ್ಲಿ ರಾಯಚೂರು ಗೋಲಪಲ್ಲಿ ಸ್ವಾಮೀಜಿ, ಚಿತ್ರದುರ್ಗದ ಬಂಜಾರ ಸಮುದಾಯದ ಸೇವಾಲಾಲ್ ಸ್ವಾಮೀಜಿ, ಕರ್ನಾಟಕ ರಾಜ್ಯ ವಾಲ್ಮೀಕಿ ಸಮಾಜದ ಸಮಾನ ಮನಸ್ಕರ ವೇದಿಕೆ ಕಾರ್ಯಾಧ್ಯಕ್ಷ ಎಂ. ನರಸಿಂಹಯ್ಯ, ಖಜಾಂಚಿ ಈ. ರಾಜಪ್ಪ, ಉಪಾಧ್ಯಕ್ಷ ತಾಯೂರ್ ಪ್ರಕಾಶ್, ಪ್ರಧಾನ ಕಾರ್ಯದರ್ಶಿ ತುಳಸೀರಾಂ, ಕಾರ್ಯದರ್ಶಿ ರಮೇಶ್ ಹಿರೇಜಂಬೂರು, ನಿವೃತ್ತ ಕುಲಪತಿ ಶ್ರೀರಾಮುಲು, ಅಲ್ಪ ಸಂಖ್ಯಾತರ ಮುಖಂಡರಾದ ಸೈಯದ್ ಮೂಸಾ, ಗೋಪಾಲ ಕೃಷ್ಣ ಮುಂತಾದವರು ಉಪಸ್ಥಿತರಿದ್ದರು.

> ಪ್ರಧಾನಿ ನರೇಂದ್ರ ಮೋದಿ, ಪ್ರತಿಪಕ್ಷ ನಾಯಕರಾದ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ಅವರಿಗೂ ಪತ್ರ ಬರೆದಿದ್ದೇನೆ. ಈ ತ್ರಿಮೂರ್ತಿಗಳು ಜತೆಗೂಡಿ ಕರ್ನಾಟಕ ಮಾತ್ರವಲ್ಲ ಇಡೀ ದೇಶದ ಪರಿಶಿಷ್ಟ ಸಮುದಾಯಗಳ ಹಿತ ಕಾಯುವ ಕೆಲಸ ಮಾಡಬೇಕು.
>
> -ವಿ.ಎಸ್.ಉಗ್ರಪ್ಪ, ನಾಯಕ ಸಮಾಜದ ಸಮಾನ ಮನಸ್ಕರ ವೇದಿಕೆ ಅಧ್ಯಕ್ಷ

## ಎಸ್‌ಸಿಪಿ-ಟಿಎಸ್‌ಪಿ ಪರಿಣಾಮ ಮೌಲ್ಯಮಾಪನ ಮೇಲ್ವಿಚಾರಣೆಗೆ ಪರಂ ನೇತೃತ್ವದಲ್ಲಿ ಸಮಿತಿ

# ಸಾಮಾಜಿಕ ಆಡಿಟ್ ನಡೆಸಲು ತೀರ್ಮಾನ

**ಬೆಂಗಳೂರು:** ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗೆ ಕಲ್ಯಾಣ ಯೋಜನೆಗಳ ಸಂಬಂಧ ಉಪಮುಖ್ಯಮಂತ್ರಿ ಡಾ.ಜಿ. ಪರಮೇಶ್ವರ ಅವರ ನೇತೃತ್ವದಲ್ಲಿ ಸಂಪುಟ ಉಪಸಮಿತಿ ರಚಿಸಲಾಗಿದ್ದು, ನಾವು ಪ್ರಣಾಳಿಕೆಯಲ್ಲಿ ಘೋಷಿಸಿರುವ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಸಿದ್ಧತೆ ಮಾಡಲಾಗುತ್ತಿದೆ. ಕೆಲವು ಯೋಜನೆಗಳು ಓವರ್ ಲ್ಯಾಪಿಂಗ್ ಆಗುತ್ತಿರುವ ಬಗ್ಗೆ ನಮ್ಮ ನಾಯಕರು ಗಮನಸೆಳೆದಿದ್ದಾರೆ. ಇಷ್ಟು ವರ್ಷಗಳ ಕಾಲ ಎಸ್‌ಸಿಪಿ-ಟಿಎಸ್‌ಪಿ ಮೂಲಕ ನೀಡಿರುವ ಅನುದಾನ ಯಾವ ರೀತಿ ಪರಿಣಾಮ ಬೀರಿದೆ ಎಂದು ಅಧ್ಯಯನ ಮಾಡಲು ಪ್ರತಿಷ್ಠಿತ ಸಂಸ್ಥೆಗಳಿಂದ ಸಾಮಾಜಿಕ ಆಡಿಟ್ ಮಾಡಿಸಲು ತೀರ್ಮಾನಿಸಲಾಗಿದೆ ಎಂದು ಮುಖ್ಯಮಂತ್ರಿ, ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2025-26ನೇ ಸಾಲಿನಲ್ಲಿನ 42,503 ಕೋಟಿ ಹಾಗೂ ಪ್ರಸಕ್ತ ಸಾಲಿನ 44,631 ಕೋಟಿಯನ್ನು 34 ಇಲಾಖೆಗಳ 451 ಯೋಜನೆಗಳಿಗೆ ಹಂಚಿಕೆ ಮಾಡಲಾಗಿದೆ. ನಮ್ಮ ಶಾಸಕರು ಹಾಗೂ ಸಚಿವರು ಹೊಸ ಆಲೋಚನೆ, ಯೋಜನೆಗಳ ಬಗ್ಗೆ ಸಲಹೆ ನೀಡುತ್ತಿದ್ದು, ಈ ಹಿನ್ನೆಲೆಯಲ್ಲಿ ಡಿಸಿಎಂ ಪರಮೇಶ್ವರ್ ಅವರ ನೇತೃತ್ವದಲ್ಲಿ ಸಮಾಜ ಕಲ್ಯಾಣ ಇಲಾಖೆ ಸಚಿವರೂ ಸೇರಿದಂತೆ ನಮ್ಮ ಎಸ್ ಸಿ, ಎಸ್ ಟಿ ಶಾಸಕರುಗಳು ಎರಡು ದಿನಗಳ ಕಾಲ ಚರ್ಚೆ ಮಾಡಿ ಏನಾದರೂ ಬದಲಾವಣೆ ಮಾಡಲು ಸಾಧ್ಯವೇ? ಎಂದು ಆರ್ಥಿಕ ಇಲಾಖೆ ಜತೆಗೂಡಿ ಚರ್ಚೆ ಮಾಡಿ ನಮಗೆ ವರದಿ ನೀಡಲಿದ್ದಾರೆ ಎಂದರು.

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಸಮಾವೇಶ ಮಾಡಲು ಸರ್ಕಾರ ತೀರ್ಮಾನಿಸಿದ್ದು, ನಮ್ಮ ನಾಯಕರು ಚರ್ಚೆ ಮಾಡಿ ಈ ಕಾರ್ಯಕ್ರಮ ಎಲ್ಲಿ ನಡೆಯಬೇಕು ಎಂಬುದರ ಬಗ್ಗೆ ತೀರ್ಮಾನ ಮಾಡಲಿದೆ. ಇದು ಐಕ್ಯತಾ ಸಮಾವೇಶವಾಗಿದ್ದು, ನಾವು ಚುನಾವಣೆಗೂ ಮುನ್ನ ಏನು ಮಾತು ನೀಡಿದ್ದೆವು, ನಾವು ಏನೆಲ್ಲಾ ಈಡೇರಿಸಿದ್ದೇವೆ ಎಂಬುದನ್ನು ಜನರಿಗೆ ತಿಳಿಸುವುದು ನಮ್ಮ ಕರ್ತವ್ಯ. ಅದನ್ನು ಮಾಡುತ್ತೇವೆ ಎಂದರು.

> ### ಅಭಿವೃದ್ಧಿ ಪರಿಷತ್ ಸಭೆಯ ಮುಖ್ಯಾಂಶ
>
> - ಕೇಂದ್ರ ಪುರಸ್ಕೃತ ಯೋಜನೆಗಳಲ್ಲಿ 2025-26 ನೇ ಸಾಲಿನಲ್ಲಿ ಬಿಡುಗಡೆ ಮಾಡದೆ ಬಾಕಿಯುಳಿಸಿರುವ 1,937 ಕೋಟಿ ಅನುದಾನ ಬಿಡುಗಡೆ ಮಾಡುವಂತೆ ಕೋರಿ ಕೇಂದ್ರಕ್ಕೆ ಪತ್ರ.
> - ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಎಲ್ಲಾ ಸಮುದಾಯಗಳಿಗೂ ಸಮಾನವಾಗಿ ಅನುದಾನ ಹಂಚಿಕೆಯಾಗುವಂತೆ ಖಾತ್ರಿಪಡಿಸಬೇಕು.
> - ಪ್ರತಿಯೊಬ್ಬ ಫಲಾನುಭವಿಯ ಛಾಯಾಚಿತ್ರ ಸೇರಿದಂತೆ ಸಂಪೂರ್ಣ ವಿವರ ವೆಬ್ ಸೈಟ್‌ನಲ್ಲಿ ಲಭ್ಯವಿರುವಂತೆ ನೋಡಿಕೊಳ್ಳಬೇಕು. ಯೋಜನೆಗಳ ಲಾಭ ಪ್ರತಿಯೊಬ್ಬರಿಗೂ ದೊರೆಯಬೇಕು.
> - ಫಲಾನುಭವಿಗಳ ಫೋಟೋ ಹಾಗೂ ವಿಡಿಯೊ ದಾಖಲಾಗಬೇಕು. ಆ ಮೂಲಕ ಪಾರದರ್ಶಕತೆ ತಂದು ಯಾವುದೇ ಕಾರಣಕ್ಕೂ ಯೋಜನೆಗಳ ದುರುಪಯೋಗವಾದಂತೆ ಎಚ್ಚರವಹಿಸಬೇಕು.

# ಗೃಹ ಇಲಾಖೆಯ ಹೆಸರು ಬದಲಾಯಿಸಿ: ಎನ್.ರವಿ

**ಬೆಂಗಳೂರು:** ಗೃಹ ಇಲಾಖೆಯ ಹೆಸರನ್ನು ಕೊಳಕು ತಂತ್ರಗಳ ಇಲಾಖೆ ಎಂದು ಬದಲಾಯಿಸುವಂತೆ ವಿಧಾನ ಪರಿಷತ್ತಿನ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಒತ್ತಾಯಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಅವರು, ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ಎಐ ಮೂಲಕ ಸೃಷ್ಟಿಸಿದ ಹಾಗೂ ತಿರುಚಿದ ಚಿತ್ರಗಳನ್ನು ಬಳಸಿಕೊಂಡು ರಾಷ್ಟ್ರೀಯ ಸ್ವಯಂಸೇವಕ ಸಂಘಕ್ಕೆ (ಆರ್‌ಎಸ್‌ಎಸ್) ಕೆಟ್ಟ ಹೆಸರು ತರಲು ಕೀಳುಮಟ್ಟದ ಕಿಡಿಗೇಡಿತನದ ಕೃತ್ಯಗಳಲ್ಲಿ ತೊಡಗಿದ್ದಾರೆ ಎಂದು ಆರೋಪಿಸಿದ್ದಾರೆ. ಇತ್ತೀಚೆಗೆ ಖರ್ಗೆ ಜೂನಿಯರ್ ಅವರು ಬಿಹಾರ ಮತ್ತು ಹರಿಯಾಣದಲ್ಲಿ ಆರ್‌ಎಸ್‌ಎಸ್ ಸ್ವಯಂಸೇವಕರು 44,000 ಕೆ.ಜಿ. ಮದ್ದುಗುಂಡುಗಳನ್ನು ಸಾಗಿಸುತ್ತಿದ್ದಾರೆ ಎಂಬಂತೆ ಬಿಂಬಿಸುವ ನಕಲಿ ಎಐ ಚಿತ್ರಗಳನ್ನು ಪ್ರಸಾರ ಮಾಡಿದ್ದಾರೆ. ಈ ಮೂಲಕ ಖರ್ಗೆ ಜೂನಿಯರ್ ತಮ್ಮ ಕೀಳು ಮನಸ್ಥಿತಿ ಸಾಬೀತುಪಡಿಸಿದ್ದಾರೆ ಎಂದು ಟೀಕಿಸಿದ್ದಾರೆ.

ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ರಾಜ್ಯದ ಅತ್ಯಂತ ಪ್ರಮುಖವಾದ ಕಾನೂನು ಮತ್ತು ಸುವ್ಯವಸ್ಥೆ ಸೇರಿದಂತೆ ಗೃಹ ಇಲಾಖೆಯ ಜವಾಬ್ದಾರಿಗಳನ್ನು ಸಮರ್ಪಕವಾಗಿ ನಿರ್ವಹಿಸುವ ಬದಲು ಆರ್‌ಎಸ್‌ಎಸ್ ವಿರುದ್ಧ ಆರೋಪ ಮಾಡುವುದರಲ್ಲೇ ತಮ್ಮ ಸಮಯ ಮತ್ತು ಶಕ್ತಿಯನ್ನು ವ್ಯರ್ಥ ಮಾಡುತ್ತಿದ್ದಾರೆ. ಇಂತಹ ಕೀಳು ಮಟ್ಟದ ಕಿಡಿಗೇಡಿ ಚಟುವಟಿಕೆಗಳನ್ನು ಪರಿಗಣಿಸಿ ಗೃಹ ಇಲಾಖೆಯ ಹೆಸರನ್ನು 'ಕೊಳಕು ತಂತ್ರಗಳ ಇಲಾಖೆ' ಎಂದು ಮರುನಾಮಕರಣ ಮಾಡುವಂತೆ ಮುಖ್ಯಮಂತ್ರಿಗಳಿಗೆ ಒತ್ತಾಯಿಸುತ್ತೇನೆ ಎಂದು ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

### ಸಾರ್ವಜನಿಕ ಸೂಚನೆ

ಮೆ॥ ಸಾಯಿ ರಾಮ್‌ಸನ್ಸ್ ವೆಂಚರ್ಸ್

(ಸಂಸ್ಥೆ ಸಂಖ್ಯೆ: BSD F484-2022-23)

(ನೋಂದಾಯಿತ ಕಚೇರಿ: ನಂ. 330/ಬಿ ಮತ್ತು 324, ಮಾರ್ಸೂರ್ ಕ್ರಾಸ್, ಚಂದಾಪುರ-ಆನೇಕಲ್ ರಸ್ತೆ, ಆನೇಕಲ್ ತಾಲ್ಲೂಕು, ಬೆಂಗಳೂರು -562106, ಕರ್ನಾಟಕ)

ನಮೂನೆ ಸಂಖ್ಯೆ ಯುಆರ್‌ಸಿ-2

ಕಂಪನಿಗಳ ಕಾಯ್ದೆ, 2013ರ ಅಧ್ಯಾಯ XXIರ ಭಾಗ Iರ ಅಡಿಯಲ್ಲಿ ನೋಂದಣಿಯ ಬಗ್ಗೆ ಸೂಚನೆ ನೀಡುವ ಜಾಹೀರಾತು.

[ಕಂಪನಿಗಳ ಕಾಯ್ದೆ, 2013ರ ಕಲಂ 374(ಬಿ) ಅನ್ನು ಕಂಪನಿಗಳ (ನೋಂದಣಿಗೆ ಅಧಿಕೃತಗೊಂಡ) ನಿಯಮಗಳು, 2014ರ ನಿಯಮ 4(1)ರೊಂದಿಗೆ ಓದಿಕೊಂಡಂತೆ]

1. ಕಂಪನಿಗಳ ಕಾಯ್ದೆ, 2013ರ ಕಲಂ 366ರ ಉಪಕಲಂ (2)ರ ಅನುಸಾರ, "ಮೆ॥ ಸಾಯಿ ರಾಮ್‌ಸನ್ಸ್ ವೆಂಚರ್ಸ್" ಎಂಬ ನೋಂದಾಯಿತ ಪಾಲುದಾರಿಕೆ ಸಂಸ್ಥೆಯನ್ನು (ಭಾರತೀಯ ಪಾಲುದಾರಿಕೆ ಕಾಯ್ದೆ, 1932ರ ಪ್ರಕಾರ 17ನೇ ಮಾರ್ಚ್ 2023ರಂದು ಸಂಸ್ಥೆ ಸಂಖ್ಯೆ: BSD F484-2022-23 ರಡಿ ನೋಂದಾಯಿಸಲಾಗಿದೆ), ಕಂಪನಿಗಳ ಕಾಯ್ದೆ 2013ರ ಅಧ್ಯಾಯ XXIರ ಭಾಗ Iರ ಅಡಿಯಲ್ಲಿ, "ಮೆ॥ ಶ್ರೀನಾಥ್ ರಾಮ್‌ಸನ್ಸ್ ವೆಂಚರ್ಸ್ ಪ್ರೈವೇಟ್ ಲಿಮಿಟೆಡ್" (ರಿಜಿಸ್ಟ್ರಾರ್ ಆಫ್ ಕಂಪನೀಸ್ ಅವರು ಲಭ್ಯವಿರುವ ಹೆಸರು) ಎಂಬ ಹೆಸರು ಮತ್ತು ಶೈಲಿಯಲ್ಲಿ, ಷೇರುಗಳಿಂದ ಸೀಮಿತವಾದ ಕಂಪನಿಯಾಗಿ ನೋಂದಾಯಿಸಬಹುದು ಎಂದು, ಈ ಸೂಚನೆಯ ದಿನಾಂಕದಿಂದ ಹದಿನೈದು ದಿನಗಳ ನಂತರ ಆದರೆ ಮುಂದಿನ ಮೂವತ್ತು ದಿನಗಳು ಮುಗಿಯುವ ಮೊದಲು, ಬೆಂಗಳೂರಿನ ಕಂಪನಿಗಳ ರಿಜಿಸ್ಟ್ರಾರ್ (ವ್ಯಾಪ್ತಿಯ ಆರ್‌ಒಸಿ), 'ಇ' ವಿಂಗ್, 2ನೇ ಮಹಡಿ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು - 560034, ಕರ್ನಾಟಕ ಇವರಿಗೆ, ಸೆಂಟ್ರಲ್ ರಿಜಿಸ್ಟ್ರೇಷನ್ ಸೆಂಟರ್ (ಸಿಆರ್‌ಸಿ), ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಕಾರ್ಪೊರೇಟ್ ಅಫೇರ್ಸ್ (ಐಐಸಿಎ), ಪ್ಲಾಟ್ ನಂ. 6, 7, 8, ಸೆಕ್ಟರ್ 5, ಐಎಂಟಿ ಮಾನೇಸರ್, ಜಿಲ್ಲೆ ಗುರುಗ್ರಾಮ (ಹರಿಯಾಣ), ಪಿನ್ ಕೋಡ್ 122050 ಮೂಲಕ ಅರ್ಜಿ ಸಲ್ಲಿಸಲು ಉದ್ದೇಶಿಸಲಾಗಿದೆ ಎಂದು ಈ ಮೂಲಕ ಸೂಚನೆ ನೀಡಲಾಗಿದೆ.
2. ಕಂಪನಿಯ ಮುಖ್ಯ ಉದ್ದೇಶಗಳು ಈ ಕೆಳಗಿನಂತಿವೆ:

2.1 ಕಂಪನಿಗಳ ಕಾಯ್ದೆ 2013ರ ಅಧ್ಯಾಯ XXIರ ಭಾಗ Iರ ಪ್ರಕಾರ "ಮೆ॥ ಸಾಯಿ ರಾಮ್‌ಸನ್ಸ್ ವೆಂಚರ್ಸ್" ಅನ್ನು "ಮೆ॥ ಶ್ರೀನಾಥ್ ರಾಮ್‌ಸನ್ಸ್ ವೆಂಚರ್ಸ್ ಪ್ರೈವೇಟ್ ಲಿಮಿಟೆಡ್" ಆಗಿ ಪರಿವರ್ತಿಸಿದ ನಂತರ, ಕಂಪನಿಯು ಎಲ್ಲಾ ಬಗೆಯ ಜವಳಿ, ಗಾರ್ಮೆಂಟ್ ಯಂತ್ರೋಪಕರಣಗಳು, ಹೈ-ಟೆಕ್ ಎಲೆಕ್ಟ್ರಾನಿಕ್ಸ್ ಹಾಗೂ ಇತರ ಸಂಬಂಧಿತ ಎಂಜಿನಿಯರಿಂಗ್ ಉತ್ಪನ್ನಗಳಾದ ಪ್ರಕ್ರಿಯೆ ಯಂತ್ರೋಪಕರಣಗಳ ತಯಾರಕರು, ವ್ಯಾಪಾರಿಗಳು, ಆಮದುದಾರರು, ರಫ್ತುದಾರರು, ಫ್ಯಾಬ್ರಿಕೇಟರ್‌ಗಳು ಮತ್ತು ಏಜೆಂಟರಾಗಿ ವ್ಯವಹಾರವನ್ನು ಮುಂದುವರಿಸುತ್ತದೆ.

3. ಪ್ರಸ್ತಾವಿತ ಕಂಪನಿಯ ಕರಡು ಮೆಮೊರಾಂಡಮ್ ಮತ್ತು ಆರ್ಟಿಕಲ್ಸ್ ಆಫ್ ಅಸೋಸಿಯೇಷನ್ ಪ್ರತಿಯನ್ನು ಸಂಸ್ಥೆಯ ನೋಂದಾಯಿತ ಕಚೇರಿಯಾದ ನಂ. 330/ಬಿ ಮತ್ತು 324, ಮಾರ್ಸೂರ್ ಕ್ರಾಸ್, ಚಂದಾಪುರ-ಆನೇಕಲ್ ರಸ್ತೆ, ಆನೇಕಲ್ ತಾಲ್ಲೂಕು, ಬೆಂಗಳೂರು - 562106, ಕರ್ನಾಟಕ ಇಲ್ಲಿ ಪರಿಶೀಲಿಸಬಹುದು.
4. ಈ ಅರ್ಜಿಗೆ ಆಕ್ಷೇಪಣೆ ಇರುವ ಯಾವುದೇ ವ್ಯಕ್ತಿಯು, ಈ ಸೂಚನೆಯ ಪ್ರಕಟಣೆಯ ದಿನಾಂಕದಿಂದ ಇಪ್ಪತ್ತೊಂದು ದಿನಗಳ ಒಳಗೆ, ತಮ್ಮ ಆಕ್ಷೇಪಣೆಯನ್ನು ಲಿಖಿತವಾಗಿ ರಿಜಿಸ್ಟ್ರಾರ್, ಸೆಂಟ್ರಲ್ ರಿಜಿಸ್ಟ್ರೇಷನ್ ಸೆಂಟರ್ (ಸಿಆರ್‌ಸಿ), ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಕಾರ್ಪೊರೇಟ್ ಅಫೇರ್ಸ್ (ಐಐಸಿಎ), ಪ್ಲಾಟ್ ನಂ. 6, 7, 8, ಸೆಕ್ಟರ್ 5, ಐಎಂಟಿ ಮಾನೇಸರ್, ಜಿಲ್ಲೆ ಗುರುಗ್ರಾಮ (ಹರಿಯಾಣ), ಪಿನ್ ಕೋಡ್ 122050 ಇವರಿಗೆ, ಕಂಪನಿಯ ನೋಂದಾಯಿತ ಕಚೇರಿಗೆ ಒಂದು ಪ್ರತಿಯೊಂದಿಗೆ ಕಳುಹಿಸಬಹುದು ಎಂದು ಈ ಮೂಲಕ ಸೂಚನೆ ನೀಡಲಾಗಿದೆ.

ಅರ್ಜಿದಾರರ ಹೆಸರು(ಗಳು)
ಮೆ॥ ಸಾಯಿ ರಾಮ್‌ಸನ್ಸ್ ವೆಂಚರ್ಸ್

| | | |
|---|---|---|
| ಸಹಿ/- ಚಾಂದ್ ಬೇಲಾನಿ, ಪಾಲುದಾರ | ಸಹಿ/- ರಾಣಿ ಚಾಂದ್ ಬೇಲಾನಿ, ಪಾಲುದಾರ | ಸಹಿ/- ಸುಂದರ್ ಬೇಲಾನಿ, ರಾಮ್‌ಸನ್ಸ್ ಗಾರ್ಮೆಂಟ್ ಫಿನಿಶಿಂಗ್ ಈಕ್ವಿಪ್‌ಮೆಂಟ್ಸ್ ಪ್ರೈವೇಟ್ ಲಿಮಿಟೆಡ್ ಅನ್ನು ಪ್ರತಿನಿಧಿಸುತ್ತಾ, ಪಾಲುದಾರ |

ದಿನಾಂಕ: 13.11.2026
ಸ್ಥಳ: ಬೆಂಗಳೂರು

**IN THE COURT OF THE ADDL. SENIOR CIVIL JUDGE AND JMFC AT MAGADI**
**ORIGINAL SUIT NO.42/2025**

**PLAINTIFFS: Smt. Gowramma** and others
-V/s-
**DEFENDANTS: Smt. Munikrishna** and others

**DEFENDANTS : 2. Smt. Gowramma**, Wife of Munikrishna, aged about 62 years, R/at #630, 8th cross, Kaverinagara, Banashankari, Near Church, BSK 2nd Stage, Bangalore south-70. **3. Sri. Manjunath .M**, Son of Munikrishna, aged about 32 years, R/at #630, 8th cross, Kaverinagara, Banashankari, Near Church, BSK 2nd Stage, Bangalore south-70. **4. Smt. Santhosh Kumar .M**, Son of Munikrishna, aged about 29 years, R/at #630, 8th cross, Kaverinagara, Banashankari, Near Church, BSK 2nd Stage, Bangalore south-70. **6. Sri. Hanumanthegowda**, Son of Late. Kunnaiah @ Kunnappa, aged about 52 years, R/at Dasara Beedi, Hosapete, Magadi Town, Ramanagara District-562120. **18. Smt. Asha .C.R**, Wife of C.K. Nagaraju, aged about 34 years, R/at No.36, 17th Main Road, Narayanappa Compound, Near Apex Bank, 2nd Stage, Sarakki Agrahara, J.P. Nagara, Bangalore-78. **19. Smt. Rani. S.N**, Wife of Vijayakumar, aged about 26 years, R/at No.21, 3rd Cross, Prahaladanagara, behind Petrol bunk, Karivobanahalli, Bangalore-73. **20. Sri. Rishi .S**, Son of Shashikanth .N, aged about 22 years, R/at No.169/10, Gurukrupa, 1st Cross, Near Anjaneyaswamy temple, Mahalakshmipuram layout, Bangalore North-86

**NOTICE**

Whereas, the plaintiffs filed suit against the defendants for the relief of partition and separate possession and enjoyment of schedule properties in O.S.No:42/2025 before the Addl. Senior Civil Judge and JMFC at Magadi and you are hereby noticed to appear in this court in person or by a pleader duly entrusted and able to answer all material questions relating to the case on **16/12/2026** at **11:00 A.M** to answer the same, failing which the suit will be disposed of exparte.

**SUIT SCHEDULE PROPERTIES**

1. Part and parcel of property bearing Sy.No:22 measuring 4 acres situated at Singadasanahalli village, Kasaba hobli, Magadi taluk bounded as follows: **East:** property of government Gomala, **West:** Property of Revaiah, **North:** Property of Gopalaiah, **South:** property of others
2. Part and parcel of property bearing Sy.No:7 measuring 4 acres situated at Singadasanahalli village, Kasaba hobli, Magadi taluk bounded as follows: **East:** property of others in same sy, **West:** property of others in same sy, **North:** property of others in same sy, **South:** property of others in same sy
3. Part and parcel of property bearing Sy. No:6/2 measuring 00-26 guntas situated at Singadasanahalli village, Kasaba hobli, Magadi taluk bounded as follows: **East:** property of Ramakka, **West:** Property of Doddaiah, **North:** Property of Doddarangaiah, **South:** property of Maranna
4. Part and parcel of property bearing Sy.No:3/4 measuring 0-29 guntas situated at Singadasanahalli village, Kasaba hobli, Magadi taluk bounded as follows: **East:** property of Ramakka, **West:** Property of Doddaiah, **North:** Property of sy.no.3/15, 3/14, **South:** property of sy.no.6/2
5. Part and parcel of property bearing Sy.No:3/13 measuring 0-20 ½ guntas situated at Singadasanahalli village, Kasaba hobli, Magadi taluk bounded as follows: **East:** property of sy.no.3/6, **West:** Property of sy.no.3/4, **North:** Property of sy.no.3/14, **South:** property of sy.no.6/2
6. Part and parcel of property bearing Sy. No:3/14 measuring 0-30 guntas situated at Singadasanahalli village, Kasaba hobli, Magadi taluk bounded as follows: **East:** property of sy.no.3/6, **West:** Property of sy.no.3/15, **North:** Property of sy.no.3/5, **South:** property of sy.no.3/14
7. Part and parcel of property bearing Sy. No:3/15 measuring 0-05 ½ guntas situated at Singadasanahalli village, Kasaba hobli, Magadi taluk bounded as follows: **East:** property of Siddaraju, **West:** Property of Doddaiah, **North:** Road, **South:** property of Asha

Given under my hand and the seal of the court, on this 02/11/2026 at Magadi

By order of the Court, Sheristedar, Senior Civil Judge & J.M.F.C Court, Magadi

**S.G. UMESH**, Advocate
Opp. KSRTC Bus Stand, Magadi-562120
Mob: 9844040565

### ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಕಣ್ವ ಶ್ರೀ ಸಾಯಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡ ಒಳರೋಗಿಗಳ 2016 ರಿಂದ 2018 ರವರೆಗಿನ ಸಾಮಾನ್ಯ ವೈದ್ಯಕೀಯ ದಾಖಲೆಗಳನ್ನು ಮತ್ತು ಹಳೆಯ ಲೆಡ್ಜರ್ ಪುಸ್ತಕಗಳ ದಾಖಲೆಗಳನ್ನು ವಿಲೇವಾರಿ ಕ್ರಮಾನುಸಾರ ಅನುಪಯುಕ್ತಗೊಳಿಸಿ ನಾಶ/ವಿಲೇ ಮಾಡಲಾಗುತ್ತಿದೆ. ರೋಗಿ/ಸಂಬಂಧಿಕರು/ವಾರಸುದಾರರು ಈ ಮೇಲ್ಕಂಡ ದಾಖಲೆಗಳ ಮಾಹಿತಿ ಅವಶ್ಯವಿದ್ದಲ್ಲಿ, ಈ ಪ್ರಕಟಣೆ ಹೊರಡಿಸಿದ ದಿನಾಂಕದಿಂದ 15 ದಿವಸದ ಒಳಗಾಗಿ, ವೈದ್ಯಕೀಯ ದಾಖಲೆಗಳ ವಿಭಾಗ (MRD), ಕಣ್ವ ಶ್ರೀ ಸಾಯಿ ಆಸ್ಪತ್ರೆ, ರಾಜೀವ್ ಗಾಂಧಿ ನಗರ, ನಂದಿನಿ ಲೇಔಟ್, ಬೆಂಗಳೂರು-96 ಇವರನ್ನು ಸಂಪರ್ಕಿಸಲು ತಿಳಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
1. ಮನಿತ್ ಕುಮಾರ್ (MRD) - 7353713055
2. ಕಣ್ವ ಶ್ರೀ ಸಾಯಿ ಆಸ್ಪತ್ರೆ ನಂ. - 809533393

ಸಹಿ/-ವೈದ್ಯಕೀಯ ನಿರ್ದೇಶಕರು
ಕಣ್ವ ಶ್ರೀ ಸಾಯಿ ಆಸ್ಪತ್ರೆ
ಕಣ್ವ ಶ್ರೀ ಸಾಯಿ ಆಸ್ಪತ್ರೆ
RKSS ಹೆಲ್ತ್ ಕೇರ್ ಪ್ರೈವೇಟ್ ಲಿಮಿಟೆಡ್‌ನ ಒಂದು ಘಟಕ
#227, ರಾಜೀವಗಾಂಧಿನಗರ, ನಂದಿನಿ ಲೇಔಟ್, ಬೆಂಗಳೂರು-560096

**IN THE COURT OF THE PRINCIPAL CIVIL JUDGE BENGALURU RURAL DISTRICT AT BENGALURU**
**O.S. No. 751/2020**

**BETWEEN : Sri. Govindaraju** S/o Raman, Aged about 42 years R/at No.408, Doddanagamangala Village, Nandagopal Reddy Layout, Electronic City Post, Bengaluru South Taluk-560100.
...Plaintiff

**AND : 1. Sri. M. Suresh** D/o Late Muniswamy, Aged about Major, R/at Doddakanahalli Village, Carmerlaram Post, Varthur Hobli, Bengaluru East Taluk.
**2. Sri. M. Moorthi,** S/o Muruga Gounder, Aged About 57 years, R/at No.21, 3rd Cross, Madduramma Badavane, Srinivasa nagar, Sunkadakatte, Bengaluru-560091.
**3. Sri. A. Paul Santhosh Kumar** S/o Anthony, Aged about 42 years, R/at No. 743, 10th Main Hosa Road, C.K. Nagar, Electronic City Post, Bengaluru South Taluk-560100.
**4. Sri Narayanaswamy,** S/o. Muniyappa, aged about 46 years, R/at Doddanagamangala Village, Beguru Hobli, Electronic City Post, Bengaluru South Taluk-560 100.
**5. Vasanth** (Ex-gramapanchayath member) S/o Shankara Narayana, Aged about 43 years, R/at Doddanagamangala Village, Beguru Hobli, Electronic City Post, Bengaluru South Taluk-560100. ...Defendants

**SUMMONS TO DEFENDANT No. 1 & 3**
**1. Sri. M. Suresh** D/o Late Muniswamy, Aged about Major, R/at Doddakanahalli Village, Carmerlaram Post, Varthur Hobli, Bengaluru East Taluk.
**3. Sri. A.Paul Santhosh Kumar** S/o Anthony, Aged about 42 years, R/at No. 743, 10th Main, Hosa Road, C.K. Nagar, Electronic City Post, Bengaluru South Taluk-560 100.

Whereas the plaintiff has filed the bare injunction suit against you and others for grant relief of permanent injunction and for consequential reliefs. You are here by summoned to appear before the Court either in person or by a pleader **on the 05.01.2027 at 11.00 AM** to defend the above case, failing which the matter will be heard and decided in your absence.

**SCHEDULE**

All that piece and parcel of the property bearing Site No. 79 & 80, out of property No. 85, katha No. 85/79-80, situated at Doddanagamangala Village, Beguru Hobli, Bangalore South Taluk, measuring about East to West 40 (Fourty) feet North to South 30 (Thirty) feet, in total 1200 square feets, (now A.C. sheet roofed house building) and bounded on:-
**East by :** Site No. 78, **West by :** Site No. 81, **North by :** Site No. 60 & 61, **South by :** Road.

Given under my hand and seal of the court This is the 7th day of November 2026.

**By Order of the Court, Sheristedar, PRL. Civil Judge's Court, Bengaluru (R) Dist., Bangalore.**
**Abijith .M.M,** Advocate
**JITH'S LAW CHAMBER**
No.33, 1st Floor, Opposite More Super Market, CBI Main Road, R.T. Nagar, Bengaluru-560032.
Mob. 9880172400, 8618462560

PRESIDENT

ಸ್ನೇಯ್ಡರ್ ಎಲೆಕ್ಟ್ರಿಕ್ ಪ್ರೆಸಿಡೆಂಟ್ ಸಿಸ್ಟಮ್ಸ್ ಲಿಮಿಟೆಡ್
CIN: L32109KA1984PLC079103
ನೋಂದಾಯಿತ ಕಚೇರಿ: 5ಸಿ/1, ಕೆಐಎಡಿಬಿ ಕೈಗಾರಿಕಾ ಪ್ರದೇಶ, ಅತ್ತಿಬೆಲೆ, ಬೆಂಗಳೂರು-562107, ಕರ್ನಾಟಕ, ಭಾರತ
ದೂರವಾಣಿ: + 919240298360, ಇ-ಮೇಲ್ : companysecretary@se.com
ವೆಬ್‌ಸೈಟ್ : www.schneiderelectricpresident.com

ಸೆಪ್ಟಂಬರ್ 30, 2026ಕ್ಕೆ ಅಂತ್ಯಗೊಂಡ 2ನೇ ತ್ರೈಮಾಸಿಕ ಮತ್ತು ಅರ್ಧವಾರ್ಷಿಕ ಮುಕ್ತಾಯದ ಆರ್ಥಿಕ ಫಲಿತಾಂಶಗಳ ಹೇಳಿಕೆಗಳು

ಸೆಪ್ಟಂಬರ್ 30, 2026ಕ್ಕೆ ಅಂತ್ಯಗೊಂಡ 2ನೇ ತ್ರೈಮಾಸಿಕ ಮತ್ತು ಅರ್ಧವಾರ್ಷಿಕ ಮುಕ್ತಾಯದ ಆರ್ಥಿಕ ಫಲಿತಾಂಶಗಳನ್ನು ಫಲಿತಾಂಶಗಳನ್ನು ಲೆಕ್ಕಪರಿಶೋಧಕ ಮತ್ತು ಅಪಾಯ ನಿರ್ವಹಣಾ ಸಮಿತಿಯು ಪರಿಶೀಲನೆ ನಡೆಸಿದೆ ಮತ್ತು 12ನೇ ನವೆಂಬರ್ 2026ರಂದು ನಡೆದ ನಿರ್ದೇಶಕ ಮಂಡಳಿಯ ಸಭೆಯು ಅಂಗೀಕರಿಸಿದೆ. ಹೇಳಲಾದ ಫಲಿತಾಂಶಗಳನ್ನು ಮೆಟ್ರೋ ಪಾಲಿಟನ್ ಸ್ಟಾಕ್ ಎಕ್ಸ್‌ಚೇಜ್ ನಲ್ಲಿ ನಿಯಂತ್ರಣ 33 ರ ಸೆಬಿ (ಲಿಸ್ಟಿಂಗ್ ಅಬ್ಲಿಗೇಷನ್ಸ್ ಮತ್ತು ಡಿಸ್‌ಕ್ಲೋಸರ್ ರಿಕ್ವಯರ್‌ಮೆಂಟ್ಸ್) ನಿಯಂತ್ರಣ, 20215 ರಂತೆ ಫೈಲ್ ಮಾಡಲಾಗಿದ್ದು, ಕ್ರಮವಾಗಿ ಬಿಎಸ್‌ಇ ಲಿಮಿಟೆಡ್ ಮತ್ತು ಮೆಟ್ರೋಪಾಲಿಟನ್ ಸ್ಟಾಕ್ ಎಕ್ಸ್‌ಚೇಂಜ್ ವೆಬ್‌ಸೈಟ್ www.bseindia.com ಮತ್ತು www.msei.in ಇಲ್ಲಿ ಲಭ್ಯವಿದೆ.

ಫಲಿತಾಂಶಗಳು ಕಂಪನಿಯ ವೆಬ್‌ಸೈಟ್ https://www.schneiderelectricpresident.com/investors/annual-reports-financials.html ಇಲ್ಲಿಯೂ ಲಭ್ಯವಿದ್ದು, ಈ ಸಂವಹನದಲ್ಲಿ ನೀಡಲಾದ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕವೂ ವಿವರಗಳನ್ನು ಪಡೆದುಕೊಳ್ಳಬಹುದು.

ನಿರ್ದೇಶಕರ ಮಂಡಳಿಯ ಪರವಾಗಿ
ಸ್ನೇಯ್ಡರ್ ಎಲೆಕ್ಟ್ರಿಕ್ ಪ್ರೆಸಿಡೆಂಟ್ ಸಿಸ್ಟಮ್ಸ್ ಲಿಮಿಟೆಡ್ ಗಾಗಿ
ಸಹಿ/-
ಅನುಜ್ ಕುಡೇಸಿಯ
ವ್ಯವಸ್ಥಾಪಕ ನಿರ್ದೇಶಕ
ಡಿಐಎನ್: 10629156

ಸ್ಥಳ: ಬೆಂಗಳೂರು
ದಿನಾಂಕ: ನವೆಂಬರ್ 12, 2026

Schneider Electric